ರಾಜ್ಯದಲ್ಲಿ ಪಶುಚಿಕಿತ್ಸಾ ಔಷಧಿ ಕೊರತೆ

1090 (1462) ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಪಶುವೈದ್ಯ ಶಾಲೆ ಹಾಗೂ ಕೇಂದ್ರಗಳಿವೆ?

ಆ) ಈ ಕೇಂದ್ರಗಳಿಗೆ ಔಷಧಿಗಳ ಸರಬರಾಜು ಮಾಡಲು ಕಳೆದ 5 ವರ್ಷಗಳಲ್ಲಿ ಎಷ್ಟು ಖರ್ಚು ಮಾಡಲಾಗಿದೆ? (ವಿವರ ಒದಗಿಸುವುದು)

ಇ) ಪಶುವೈದ್ಯ ಶಾಲೆಗಳಲ್ಲಿ ಔಷಧಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಔಷಧಿ ಸರಬರಾಜು ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) 293 ಪಶುವೈದ್ಯ ಆಸ್ಪತ್ರೆಗಳು, 853 ಪಶುವೈದ್ಯ ಶಾಲೆಗಳು ಹಾಗೂ 2055 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಇವೆ

ಆ) ಕಳೆದ 5 ವರ್ಷಗಳಲ್ಲಿ ಔಷಧಿ, ರಾಸಾಯನಿಕಗಳು ಮತ್ತು ಚುಚ್ಚುಮದ್ದುಗಳಿಗೆ ಸರ್ಕಾರದಿಂದ, ಜಿಲ್ಲಾ ಪಂಚಾಯತ್‌ಗಳಿಂದ, ಕುರಿ ಮಂಡಳಿ ಮತ್ತು ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯಿಂದ ಖರ್ಚಾದ ಮೊತ್ತದ ವಿವರ

1995- 1996	9.34	ಕೋಟಿ ರೂ.ಗಳು
1996- 1997	10. 16	ಕೋಟಿ ರೂ.ಗಳು
1997- 1998	9.49	ಕೋಟಿ ರೂ.ಗಳು
1998- 1999	8. 10	ಕೋಟಿ ರೂ.ಗಳು
1999- 2000	5.47	ಕೋಟಿ ರೂ.ಗಳು

ಇ) ಹೆಚ್ಚು ವಂಟನ ಬೇಡಿಕೆ ಸರ್ಕಾರದ ಪರಿಶೀಲನೆಯಲ್ಲಿದೆ. ಮುಂಬರುವ ವರ್ಷದಲ್ಲಿ ಹೆಚ್ಚಿನ ವಂಟನ ನೀಡಲಾಗುತ್ತದೆ.

ಉತ್ತರಕನ್ನಡ ಜಿಲ್ಲೆಯ ಕೆನರಾ ಸರ್ಕಲ್‌ನಲ್ಲಿ ಅರಣ್ಯ ಗುತ್ತಿಗೆ ಕಾಮಗಾರಿ

1092 (1217) ಶ್ರೀ ಜಿ.ಡಿ. ನಾಯಕ್ (ಭಟ್ಕಳ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕೆನರಾ ಸರ್ಕಲ್‌ನಲ್ಲಿ ಅರಣ್ಯ ಲಾಗಿಂಗ್ ಮತ್ತು ಡಿಪೋ ಗುತ್ತಿಗೆ ಕಾಮಗಾರಿ ವಿಷಯದಲ್ಲಿ ತಾರತಮ್ಯ ಮಾಡಿ ಅಕ್ರಮವಾಗಿ ಕೆಲವು ಭಟ್ಟಭದ್ರ ಹಿತಾಸಕ್ತಿಗಳು ಕೆಲವು ಕೂಲಿಕಾರ ಸಹಕಾರಿ ಸಂಘಗಳನ್ನು ಕೈಬಿಟ್ಟು ಗುತ್ತಿಗೆ ಕೊಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ಸದರಿ ಗುತ್ತಿಗೆ ವಿಷಯದಲ್ಲಿ ಯಾವುದೇ ಕಾನೂನು ಕ್ರಮ ಪಾಲನೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರಿ ಗುತ್ತಿಗೆಯಲ್ಲಿ ಪಾಲನೆ ಆದ ಕಾನೂನು ಕ್ರಮ ಮಾನದಂಡ ಹಾಗೂ ಭಾಗವಹಿಸಿದ ಸಂಘದ ವಿವರಗಳನ್ನು ನೀಡುವುದು.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಬಂದಿರುವುದಿಲ್ಲ

ಆ) ಬಂದಿರುವುದಿಲ್ಲ ಮತ್ತು ಸರ್ಕಾರಿ ಆದೇಶಗಳು ಹಾಗೂ ನ್ಯಾಯಾಲಯದ ಆದೇಶದಂತೆ ಕಾನೂನು ಕ್ರಮ ಪಾಲನೆ ಮಾಡಲಾಗಿದೆ.

ಇ) ಸರ್ಕಾರಿ ಆದೇಶ ಸಂ: ಎಎಚ್ಎಫ್ಎಫ 12 ಎಫ್ಎಡಿ 90, ದಿನಾಂಕ : 26- 12- 1990, ಎಎಜ್ಎಫ್ಎಫ್ 92 ಎಫ್ಎಡಿ 1991 ದಿನಾಂಕ : 05-09- 1991, ಎಫ್ಇಇ :92 ಎಫ್ಎಡಿ 2000, ದಿನಾಂಕ 13-07-2000 ಹಾಗೂ ಮಾನ್ಯ ಉಚ್ಚನ್ಯಾಯಾಲಯ ಬೆಂಗಳೂರಿನಲ್ಲಿ ಸಲ್ಲಿಸಿದ ರಿಟ್ ಅರ್ಜಿ ಸಂ:29950 ಹಾಗೂ 30970 ರಿಂದ 30981:99ರ ಮೇಲೆ ಆದೇಶ ದಿನಾಂಕ :24-01-2000ರಂತೆ ಸಹಕಾರಿ ಸಂಘಗಳ ಕಾಯ್ದೆ 1956ರ ಆದಿಯಲ್ಲಿ ದಿನಾಂಕ:26- 12- 90ರ ವರೆಗೆ ನೊಂದಾವಣಿಯಾಗಿ "ಅಸ್ತಿತ್ವದಲ್ಲಿರುವ" ಅರಣ್ಯ ಕೂಲಿಕಾರರ ಸಹಕಾರಿ ಸಂಘಗಳಿಗೆ ಅವರು ಈ ಹಿಂದೆ ನಿರ್ವಹಿಸಿದ ಲಾಗಿಂಗ್ ಕೆಲಸಗಳ ಕಾರ್ಯ ನಿರ್ವಹಣೆ ಆಧಾರದಲ್ಲಿ ಅಂತಹ ಸಂಘಗಳಿಗೆ ಮಾತ್ರ ಲಾಗಿಂಗ್ ಕೆಲಸಗಳನ್ನು ಹಂಚಿಕೆ ಮಾಡಲು ಅವಕಾಶವಿರುತ್ತದೆ. ಈ ಮೇಲಿನ ಚೌಕಟ್ಟಿನಲ್ಲಿ ಬರುವ ಸಂಘಗಳಿಗೆ ಮಾತ್ರ ಲಾಗಿಂಗ್ ಕೆಲಸಗಳನ್ನು ಇಲ್ಲವೇ ಡಿಪೋ ನಡೆಸುವ ಗುತ್ತಿಗೆಯನ್ನು ಕೊಡಲಾಗುತ್ತಿದೆ.

ಅರಣ್ಯ ಕೂಲಿಕಾರರ ಸಹಕಾರ ಸಂಘಗಳ ವಿವರಗಳು ಈ ರೀತಿಯಂತಿದೆ :

1. ಉಳಗಾ ಕೂಲಿಕಾರರ ಸಹಕಾರ ಸಂಘ, ಉಳಗಾ, ಕಾರವಾರ.
2. ಅಂಕೋಲಾ ಕೂಲಿಕಾರರ ಸಹಕಾರಿ ಸಂಘ, ನಿಯಮಿತ, ಅಂಕೋಲಾ.
3. ಭಾವಿಕೇರಿ ಕೂಲಿಕಾರರ ಸಹಕಾರಿ ಸಂಘ, ಭಾವಿಕೇರಿ, ಅಂಕೋಲಾ.
4. ಅಂದ್ಲೆ ಕೂಲಿಕಾರರ ಸಹಕಾರಿ ಸಂಘ, ಅಂದ್ಲೆ, ಅಂಕೋಲಾ.
5. ಶಿರಗುಂಜಿ ಕೂಲಿಕಾರರ ಸಹಕಾರಿ ಸಂಘ, ಶಿರಗುಂಜ, ಅಂಕೋಲಾ.
6. ಗ್ರಾಮೀಣ ಉದ್ಯೋಗ ಅಭಿವೃದ್ಧಿ ಸಹಕಾರಿ ಸಂಘ, ಬಾಸ್ಕೋಡ, ಅಂಕೋಲಾ.
7. ಶ್ರೀ ಬರ್ಡ ನೌಕಾನೆಲೆ ನಿರಾಶ್ರಿತರ ಕೂಲಿಕಾರರ ಸಹಕಾರಿ ಸಂಘಂ ಬೇಲಿಕೇರಿ, ಅಂಕೋಲಾ.
8. ಕುಡುವಳ್ಳಿ ಕೂಲಿಕಾರರ ಸಹಕಾರಿ ಸಂಘ, ಕುಡುವಳ್ಳಿ, ಕುಮಟಾ.

9. ಸಾಲಕೋಡ ಗ್ರೂಪ್ ಕೂಲಿಕಾರರ ಸಹಕಾರಿ ಸಂಘ, ಸಾಲಕೋಡ, ಹೊನ್ನಾವರ.

10. ಶಿರಸಿ ತಾಲ್ಲೂಕಾ ಲೇಬರ್ ಕೋ ಆಪರೇಟಿವ್ ಸೊಸೈಟಿ, ಶಿರಸಿ.

11. ರಾಮನಬೈಲ ಫಾರೆಸ್ಟ್ ಲೇಬರ್ ಕೋ ಆಫ್ ಸೊಸೈಟಿ, ರಾಮನಬೈಲ, ಸಿರಸಿ.

12. ಬ್ಯಾಕ್‌ವರ್ಡ್ ಕ್ಲಾಸ್ ಲೇಬರ್ ಕೋ ಆಪರೇಟಿವ್ ಸೊಸೈಟಿ, ಚಿಪಗಿ, ಶಿರಸಿ.

13. ಪ್ರೊಗ್ರೆಸ್ಸಿವ್ ಲೇಬರ್ ಕೋ ಆಫ್ ಸೊಸೈಟಿ, ದೌತಿ, ಯಲ್ಲಾಪುರ.

2000-2001ನೇ ಸಾಲಿನಲ್ಲಿ ಒಣ ಮತ್ತು ಗಾಳಿಯಲ್ಲಿ ಕಿತ್ತು ಬಿದ್ದ ಮರಗಳ ಕಾಮಗಾರಿ ಬಗ್ಗೆ ಕಾಮಗಾರಿಯ ಅನುಮೋದನೆ ಕುರಿತು ಕೇಂದ್ರ ಸರ್ಕಾರಕ್ಕೆ ಕ್ರಿಯಾ ಯೋಜನೆ ಸಲ್ಲಿಸಲಾಗಿದ್ದು, ಈವರೆಗೆ ಅನುಮೋದನೆ ಆಗದೇ ಇರುವುದರಿಂದ ಬೇರೆ ಯಾವುದೇ ಕಾಮಗಾರಿಯನ್ನು ಯಾವುದೇ ಸಹಕಾರಿ ಸಂಘಗಳಿಗೆ ಹಂಚಿಕೆ ಮಾಡಿರುವುದಿಲ್ಲ.

ಭದ್ರಾ ಜಲಾಶಯ ಕೆಳಭಾಗದಲ್ಲಿ ಬೃಂದಾವನ ನಿರ್ಮಾಣ

1093 (1146) ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಜಲಾಶಯದ ಕೆಳಭಾಗದಲ್ಲಿ ಕೆ.ಆರ್.ಎಸ್. ಮಾದರಿ ಬೃಂದಾವನ ನಿರ್ಮಿಸಲು ಸರ್ಕಾರ ಯೋಚಿಸಿದೆಯೇ;

ಆ) ಈ ಬಗ್ಗೆ ಅಂದಾಜು ವೆಚ್ಚ ಮತ್ತು ಸ್ಥಳದ ನಕ್ಷೆ ತಯಾರಿಸಿದೆಯೆ;

ಇ) ಕೆ.ಆರ್.ಎಸ್. ಮಾದರಿ ಬೃಂದಾವನ ರೂಪಿಸಲು ನಡೆದ ಸಭೆಗಳೆಷ್ಟು; ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳೇನು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಹಾಗೂ ಹಜ್ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ತರೀಕೆರೆಯಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆ ಕಛೇರಿ ಸ್ಥಾಪನೆ

1094 (1147) ಶ್ರೀ ಬಿ.ಆರ್. ನಿಲಕಂಠಪ್ಪ (ತರೀಕೆರೆ) : ಮಾನ್ಯ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆಯಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯ ಕಛೇರಿಯನ್ನು ತೆಗೆಯಲು ಸರ್ಕಾರ ಒದಗಿಸಿದೆ ಹಣವೆಷ್ಟು?